ಮಾರ್ಕೆಟಿಂಗ್ ಫೆಡರೇಷನ್ ಬೆಂಗಳೂರು ಆದಾಯದಲ್ಲಿದೆಯೇ ಅಥವಾ ನಷ್ಟದಲ್ಲಿದೆಯೇ ಎಂಬುದರ ಬಗ್ಗೆ..

೧೪೩. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿರುವ ಮಾರುಕಟ್ಟೆ ಸಂಸ್ಥೆಯು ಆದಾಯದಲ್ಲಿ ಅಥವಾ ನಷ್ಟದಲ್ಲಿ ನಡೆಯುತ್ತಿರುವುದೆಯೇ,

ಆ) ನಷ್ಟದಲ್ಲಿ ನಡೆಯುತ್ತಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಮಾರಾಟ ಮಹಾ ಮಂಡಳಿಯು ನಷ್ಟದಲ್ಲಿ ನಡೆಯುತ್ತಿರುವುದು.

ಆ) ಮಹಾ ಮಂಡಳಿಯುವರ ವರದಿ ರೀತ್ಯಾ, ಸಂಸ್ಥೆಯು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಮುಖ್ಯ ಕಾರಣಗಳು ಕೆಳಗೆ ಸೂಚಿಸಿದ ರೀತಿಯಲ್ಲಿವೆ.—

೧) ಸನ್ ೧೯೭೨–೭೮ ರಿಂದ ಇಲ್ಲಿಯವರೆಗೆ ರಸಾಯನಿಕ ಗೊಬ್ಬರಗಳ ವ್ಯವಹಾರಕ್ಕಾಗಿ ಸರ್ಕಾರದಿಂದ ಪಡೆದ ಆಲ್ಪಾವಧಿ ಸಾಲಗಳ ಮೇಲೆ ಸುಸ್ತಿಬಡ್ಡಿ ಕೊಡಬೇಕಾಗಿರುವುದರಿಂದ,

೨) ಸನ್ ೧೯೭೩–೭೪ ಮತ್ತು ೧೯೭೪–೭೫ರಲ್ಲಿ ತೊಗರಿಬೇಳೆ ಮತ್ತು ಮೆಕ್ಕೆ ಜೋಳದ ಬೆಲೆಗಳಲ್ಲಿ ಇಳಿಮುಖವಾಗಿದ್ದುದರಿಂದ,

೩) ಬಾಡಿಗೆ ಮೇಲೆ ಪಡೆದುಕೊಂಡಿದ್ದ ರಾಯಚೂರು ಎಣ್ಣೆ ಘಟಕವು ನಷ್ಟದಲ್ಲಿ ಕೆಲಸ ಮಾಡುತ್ತಿದ್ದುದರಿಂದ, ಮತ್ತು

೪) ಸಿಬ್ಬಂದಿ ವೆಚ್ಚಗಳು ಹೆಚ್ಚಾಗಿರುವುದರಿಂದ.

ಸರಕಾರೀ ಜಮೀನನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಸದರಿ ಜಮೀನನ್ನು ಖಾಯಂ ಮಾಡುವ ಬಗ್ಗೆ.

೧೪೪. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹತ್ತಾರು ವರ್ಷಗಳಿಂದಲೂ ಹಂಗಾಮಿಯಾಗಿ ಸರಕಾರಿ ಜಮೀನನ್ನು ಸಾಗುವಳಿ ಮಾಡುತ್ತಿರುವ ಬಡರೈತರಿಗೆ ಸದರಿ ಜಮೀನನ್ನು ಅವರಿಗೇ ಖಾಯಂಗೊಳಿಸುವ ಬಗ್ಗೆ ಕಳೆದ ಎರಡು ಅಧಿವೇಶನಗಳಿಂದಲೂ ಸರಕಾರದವರು ಆಶ್ವಾಸನೆ ನೀಡಿದ್ದುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಈವರೆಗೂ ಸದರಿ ಜಮೀನನ್ನು ಖಾಯಂಗೊಳಿಸದೇ ಇರುವುದರಿಂದ, ರೈತರುಗಳಿಗೆ ನಾನಾ ರೀತಿಯಲ್ಲಿ ಕಿರುಕುಳ ಆಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸರಕಾರದವರು ಕೂಡಲೇ ಆ ಬಗ್ಗೆ ಕ್ರಮ ಕೈಗೊಂಡು ಬಡರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಕಳೆದ ಎರಡು ಅಧಿವೇಶನದಲ್ಲಿ ಬಡ ರೈತರು ಹತ್ತಾರು ವರ್ಷಗಳಿಂದಲೂ ಹಂಗಾಮಿಯಾಗಿ ಸಾಗುವಳಿ ಮಾಡಿ ಅಭಿವೃದ್ಧಿಪಡಿಸಿರುವ ಸರ್ಕಾರಿ ಭೂಮಿಯನ್ನು ಅಂತಹ ಸಾಗುವಳಿದಾರರಿಗೆ ಖಾಯಂ ಆಗಿ ಮಂಜೂರು ಮಾಡಿ ಕೊಡುವುದಾಗಿ ಸರ್ಕಾರದವರು ಯಾವ ಆಶ್ವಾಸನೆಯನ್ನು ಕೊಟ್ಟಿರುವುದಿಲ್ಲ.

ಆ)
ಇ) ಮೇಲಿನ ಉಪ-ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.